ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 1326/2019**

ಸಿ.ಡಬ್ಲೂ-7 ಪಿ.ಡಬ್ಲೂ -4

ದಿಃ **20.03.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಕೆಂಡಾರೆಡ್ಡಿ |
| ಗಂಡ/ತಂದೆಯ ಹೆಸರು | ಹೇಮಾರೆಡ್ಡಿ |
| ವಯಸ್ಸು | ಸುಮಾರು **54** ವರ್ಷ |
| ಕೆಲಸ | ಆರಂಭ |
| ವಾಸಸ್ಥಳ | ರೆಡ್ಡಿಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಮತ್ತು 2 ಗೊತ್ತು. ಆರೋಪಿತರು ಗೊತ್ತು. ಈಗ್ಗೆ 3 ವರ್ಷಗಳ ಹಿಂದೆ ಚಾಸಾ-1 ಹಾಗೂ ಆರೋಪಿತರು ಜಮೀನ ವಿಚಾರವಾಗಿ ತಲ್ಲಾಡುತ್ತಿದ್ದರು. ಚಾಸಾ-1 ಹಾಗೂ 1 ನೇ ಆರೋಪಿ ತಲ್ಲಾಡುತ್ತಿದ್ದರು. ಆರೋಪಿ ಹಾಗೂ ಚಾಸಾ-1 ರವರ ನಡುವೆ ಹೋಗಿ ಅಳತೆ ಮಾಡಿಸಿಕೋಳ್ಳಿ ಎಂದು ಹೇಳಿ ವಾಪಾಸ ಕಳಿಸಿ ಬಂದಿರುತ್ತೇನೆ ಎಂದು ಹೇಳುತ್ತಾರೆ. ಮತ್ತೆ ಏನು ಗಲಾಟೆ ಆಯಿತು ಎಂಬ ವಿಚಾರ ಗೊತ್ತಿಲ್ಲ.

ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಪಿಸಬೇಕಾಗಿ ಕೋರಿದ್ದು, ಆಲಿಸಿ ಅನುಮತಿಸಲಾಯಿತು.

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿಃ 09.03.2019 ರಂದು ಚಾಸಾ-1 ರವರು 1 ನೇ ಆರೋಪಿ ಸ.ನಂ. 42/ಪಿ6 ರ ಜಮೀನಿಗೆ ತಂತಿ ಬೇಲಿ ಹಾಕಿಕೊಂಡಿದ್ದು, ಅದನ್ನು ಕೇಳಲು ಹೋದಾಗ ಗಲಾಟೆ ಮಾಡಿರುವುದಾಗಿ ತೀರ್ಮಾನ ಮಾಡಿಕೊಡಿ ಎಂದು ನಿಮ್ಮನ್ನು ಹಾಗೂ ಚಾಸಾ-5, 6 ಮತ್ತು 8 ರವರನ್ನು ಕೇಳಿರುತ್ತಾರೆಂದರೆ ಸರಿಯಲ್ಲ.

ದಿಃ 10.03.2019 ರಲ್ಲಿ ನೀವು ಹಾಗೂ ಚಾಸಾ-5, 6 ಮತ್ತು 8 ರವರೊಂದಿಗೆ ಚಾಸಾ-1 ರವರೊಂದಿಗೆ ಜಮೀನ ಬಳಿ ಬೆಳಿಗ್ಗೆ 8 ಗಂಟೆಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ-1, 1 ನೇ ಆರೋೀಪಿ ತನಗೆ ಸೇರಿದ ಜಮೀನಿಗೆ ಹಾಕಿದ ಬೆಲೆಯನ್ನು ನಿಮ್ಮಗಳಿಗೆ ತೋರಿಸಿರುತ್ತಾರೆಂದರೆ ಯಾವುದು ಇಲ್ಲ ಎಂದು ಹೇಳುತ್ತಾರೆ. ಆಗ 1 ನೇ ಆರೋಪಿ ಬಂದು ಗ್ರಾಮದ ಮುಖ್ಯಸ್ಥರನ್ನು ಕರೆತಂದರೆ ಜಮೀನು ಬಿಡುತ್ತೀನಾ ಬೋಳಿ ಮಗನೆ ಎಂದು ಕಲ್ಲಿನಿಂದ ಚಾಸಾ-1 ರವರ ತಲೆಯ ಮುಂಭಾಗಕ್ಕೆ ಹೊಡೆದಿರುತ್ತಾರೆಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. 2 ಮತ್ತು 3 ನೇ ಆರೋಪಿತರು ಸೇರಿಕೊಂಡು ಚಾಸಾ-1 ರವರನ್ನು ತಬ್ಬಿಹಿಡಿದು ಕೈ ಯಿಂದ ಮೈಕೈಗೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ

ಸಾಕ್ಷಿ 2 ನೇ ಆರೋಪಿ ಸ್ಥಳದಲ್ಲೇ ಇರಲಿಲ್ಲ ಎಂದು ಹೇಳುತ್ತಾರೆ. ಚಾಸಾ-2 ರವರು ಬಿಡಿಸಲು ಮುಂದಾದಾಗ 4 ನೇ ಆರೋಪಿ ಕೈ ಯಿಂದ ಚಾಸಾ-4 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ನೀವು ಹಾಗೂ ಚಾಸಾ-5, 6 ಮತ್ತು 8 ಎಲ್ಲಾ ಸೇರಿ ಜಗಳ ಬಿಡಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ಚಾಸಾ-1 ಹಾಗೂ 2 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಹೊರಟುಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ 11.03.2019 ರಂದು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ಪೊಲೀಸರು ಏನು ಕೇಳಿಲ್ಲ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರು ನಿಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರು ಶ್ರೀ ಎಸ್.ಜಿ. ವಕೀಲರಿಂದಃ**

ನಿಮಗೆ ಯಾವಗಿನಿಂದ ಕಾಲು ಇಲ್ಲ ಎಂದರೆ ಸಾಕ್ಷಿ ಡಿಸೆಂಬರ್ 2019 ರಿಂದ ನನಗೆ ಕಾಲು ಇಲ್ಲ ಎಂದು ಹೇಳುತ್ತಾರೆ. ಅದಕ್ಕಿಂತ ಮುಂಚಿತವಾಗಿ ನಿಮಗೆ ಹುಷಾರ ಇರಲಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಸ್ವಲ್ಪ ಇರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನರದ ಸಮಸ್ಯೆ ಉಂಟಾಗಿತ್ತು. ಆರೋಪಿತರು ಹಾಗೂ ಚಾಸಾ-1 ರವರ ಮಧ್ಯ ಸಣ್ಣ ಪುಟ್ಟ ಗಲಾಟೆಯ ಬಗ್ಗೆ ನಿಮಗೇನು ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.